**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಕೊಪ್ಪ**

**<u>ಸಿ. ಸಿ. ನಂ.129/2020</u>**

| | |
|---|---|
| **<u>ಪಿರ್ಯಾಧಿದಾರರುಃ</u>** | ಶ್ರೀ ಬಿ.ಟಿ. ವಿಜೇಂದ್ರ ಬಿನ್ ತಮ್ಮೇಗೌಡ, ಸುಮಾರು 50 ವರ್ಷ, ವ್ಯವಸಾಯ ಮತ್ತು ವ್ಯಾಪಾರ, ವಾಸ ಎ.ಜಿ.ಕಟ್ಟೆ, ಹೊಸಕೊಪ್ಪ ಅಂಚೆ, ಅಸಗೋಡು ಗ್ರಾಮ, ಕೊಪ್ಪ ತಾಲ್ಲೂಕು. |

**-ವಿರುದ್ದ -**

| | |
|---|---|
| **<u>ಆರೋಪಿಃ</u>** | ಶ್ರೀ ಸುಧಾಕರ ಕೆ.ಕೆ. ಬಿನ್ ಕಳಸಪ್ಪ ಗೌಡ, ಸುಮಾರು 50 ವರ್ಷ, ವ್ಯವಸಾಯ, ವಾಸ ಕೊರೋಡಿ, ದಾಯಂಬಳ್ಳಿ ಗ್ರಾಮ ಮತ್ತು ಅಂಚೆ,ಕೊಪ್ಪ ತಾಲ್ಲೂಕು. |

**<u>ಆರೋಪಣೆ</u>**

ಆರೋಪಿಯಾದ ನೀವು ನಿಮ್ಮ ತುರ್ತು ಅವಶ್ಯಕತೆಗಾಗಿ ಪಿರ್ಯಾಧಿದಾರರಿಂದ 2019 ನೇ ಜುಲೈ 3 ನೇ ವಾರ ದಂದು ರೂ. 2,50,000/- ಗಳ ಕೈ ಸಾಲವನ್ನು ಪಡೆದುಕೊಂಡಿದ್ದು, ಸದರಿ ಸಾಲವನ್ನು ತೀರುವಳಿ ಮಾಡುವ ಸಲುವಾಗಿ ನೀವು ನಿಮ್ಮ ಬಾಬ್ತು ಅವರಿಗೆ ಚೆಕ್ ನಂ.166433, ದಿನಾಂಕ 25.11.2019 ನ್ನು ನಮೂದಿಸಿದ ಕಾವೇರಿ ಗ್ರಾಮೀಣ ಬ್ಯಾಂಕ್, ಕೊಪ್ಪ ಶಾಖೆಯ ಒಂದು ಚೆಕ್ಕನ್ನು ನೀಡಿದ್ದು, ಅವರು ಸದರಿ ಚೆಕ್ಕನ್ನು ಸಿ.ಡಿ.ಸಿ.ಸಿ. ಬ್ಯಾಂಕ್, ಹರಿಹರಪುರ ಶಾಖೆಗೆ ಹಾಜರುಪಸಿದಾಗ "**Insufficient funds**"ಎಂಬ ಹಿಂಬರಹದೊಂದಿಗೆ ನೀವು ಕೊಟ್ಟಂತ ಚೆಕ್ ವಾಪಸ್ಸಾಗಿದ್ದು ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ ನಿಮ್ಮ ಗಮನಕ್ಕೆ ದಿನಾಂಕ 17.12.2019 ರಂತೆ ವಕೀಲರ ನೋಟೀಸು ನೀಡಿದ್ದು, ಸದರಿ ನೋಟೀಸು ನಿಮಗೆ ದಿನಾಂಕ 27.12.2019 ರಂದು ನಿಮಗೆ ಜಾರಿಯಾಗಿದ್ದು, ನೀವು ಚೆಕ್ ಬಾಬ್ತು ಹಣವನ್ನು ನೀಡದೇ ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಪ್ರಶ್ನೆ 1ಃ- ನಿಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?
ಉತ್ತರಃ ತಿಳಿಯಿತು.

ಪ್ರಶ್ನೆ 2ಃ- ಮೇಲಿನ ಆಪಾಧನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆ?
ಉತ್ತರಃ ವಿಚಾರಣೆಯಾಗಬೇಕು.

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವೆಂದು ದೃಢೀಕರಿಸುತ್ತೇನೆ.

ಸಹಿ/- 25.06.2025.
ದಿನಾಂಕಃ 25.06.2025. (ಎಂ.ಎನ್. ನಂದಿನಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕೊಪ್ಪ